ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ. ಆದರೆ, ಸದನದೊಳಗೆ ಇನ್ನೂ ಇದರ ಬಗ್ಗೆ ಅಂತಿಮ ತೀರ್ಮಾನ ಕೈಗೊಂಡಿಲ್ಲ ಎಂದು ಹೇಳುತ್ತಿದ್ದೀರಿ. ಮಂತ್ರಿಗಳು ಒಂದು ತಿಂಗಳ ಹಿಂದೆ ಹೇಳಿಕೆ ಕೊಟ್ಟಿರುವುದು ಪತ್ರಿಕೆಗಳಲ್ಲಿ ಬಂದಿದೆ. ಏನೆಂದರೆ, ಇಷ್ಟಿಷ್ಟು ಮಧ್ಯಂತರ ಮಂಡಲಪಂಚಾಯಿತಿಗಳನ್ನು ಪುರಸಭೆಗಳನ್ನಾಗಿ ಪರಿವರ್ತನೆ ಮಾಡಲು ಸರ್ಕಾರ ತೀರ್ಮಾನ ಕೈಗೊಂಡಿದೆ ಎಂದು. ಆದುದರಿಂದ, ಸರ್ಕಾರದ ಈ ದ್ವಂದ್ವ ನಿಲುವು ಏನಿದೆ ? ಇದನ್ನು ಸ್ಪಷ್ಟಪಡಿಸಬೇಕೆಂದು ತಮ್ಮ ಮೂಲಕ ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ನಗರಾಭಿವೃದ್ಧಿ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಪಂಚಾಯತ್ ರಾಜ್ ಸಂಸ್ಥೆಗೆ ಸಂಬಂಧಪಟ್ಟ ವಿಧೇಯಕ ಬರುತ್ತಿದೆ. ಈ ಪಂಚಾಯಿತಿಗಳನ್ನು ಪುರಸಭೆಗಳನ್ನಾಗಿ ಪರಿವರ್ತಿಸುವುದು, ಪುರಸಭೆಗಳನ್ನು ಪಂಚಾಯಿತಿಗಳನ್ನಾಗಿ ಪರಿವರ್ತಿಸುವ ವಿಷಯಗಳೆಲ್ಲವೂ ವಿಧೇಯಕದಲ್ಲಿ ಅಡಗಿದೆ. ಆ ವಿಧೇಯಕ ಬಂದ ನಂತರ ಅದರಲ್ಲಿ ಏನು ತೀರ್ಮಾನ ಮಾಡುತ್ತಾರೋ ಅದರಂತೆ ಮುಂದಿನ ಪಂಚಾಯಿತಿಗಳು ಮತ್ತು ಪುರಸಭೆಗಳು ರಚನೆಯಾಗುತ್ತವೆ. ಆದುದರಿಂದ, ಈ ರೀತಿ ಬದಲಾವಣೆ ಮಾಡಬೇಕೆನ್ನುವ ವಿವೇಚನೆ ನಡೆದಿದೆಯೇ ವಿನಹ ತೀರ್ಮಾನ ಯಾವುದೂ ಮಾಡಿಲ್ಲ.

ದಶಲಕ್ಷ ಬಾವಿ ಯೋಜನೆಯಲ್ಲಿ ತುಮಕೂರು ಜಿಲ್ಲೆಗೆ ಒದಗಿಸಲಾದ ಹಣ.

337 (1567): ಶ್ರೀ ಜಿ. ಎಸ್. ಶಿವಸಂಜಪ್ಪ (ಗುಬ್ಬಿ):–

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. 1991-92, 1992-93ನೇ ಸಾಲುಗಳಲ್ಲಿ ದಶಲಕ್ಷ ಬಾವಿ ಯೋಜನೆ ಅಡಿಯಲ್ಲಿ ತುಮಕೂರು ಜಿಲ್ಲೆಗೆ ಒದಗಿಸಲಾಗಿರುವ ಹಣವೆಷ್ಟು;

ಆ. ಅದರಲ್ಲಿ ಯಾವ ಯಾವ ತಾಲ್ಲೂಕಿಗೆ ಎಷ್ಟೆಷ್ಟು ಹಣ ಖರ್ಚಾಗಿರುತ್ತದೆ ಹಾಗೂ ಎಷ್ಟು ಹಣ ಉಳಿದಿದೆ (ವಿವರ ನೀಡುವುದು) ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–

ಅ. ಮಾಹಿತಿಯನ್ನು ಲಗತ್ತಿಸಿರುವ ಅನುಬಂಧ 1ರಲ್ಲಿ ಒದಗಿಸಲಾಗಿದೆ.

ಆ. ಮಾಹಿತಿಯನ್ನು ಲಗತ್ತಿಸಿರುವ ಅನುಬಂಧ 2 ಮತ್ತು 3ರಲ್ಲಿ ಒದಗಿಸಲಾಗಿದೆ.

ANNEXURE I

NAME OF THE DISTRICT	Amount released during	
	1991-92	1992-93
	(Rs. in lakhs)	
TUMKUR	231.850	226.150

ANNEXURE - II

Sl. No.	Name of the Taluk	Amount spent (Rs. in lakhs)	
		1991-92	1992-93
1.	Tumkur	23.898	26.869
2.	Gubbi	18.291	14.233
3.	Kunigal	8.228	11.585
4.	Tiptur	32.828	11.687
5.	Turuvekere	8.886	9.260
6.	C. N. Hally	42.537	23.512
7.	Madhugiri	40.827	17.473
8.	Koratagere	21.208	15.875
9.	Sira	39.961	10.810
10.	Pavagada	35.947	26.404
	Total:-	272.611	167.708

ANNEXURE - III

Sl. No.	Name of the Implementing Officer	Balance available (Rs. in lakhs)	Remarks
1.	Executive Engineer, Zilla Parishad Engineering Division, Tumkur	17.80	
2.	Executive Engineer, Zilla Parishad Engineering Division, Madhugiri	33.00	

3. Deputy Director of Agriculture (Soil Conservation)	9.50	Release of money not made Talukwise but releases made to
4. Project Director, DLDB, Tumkur	3.00	Implementing Officerswise like Executive Engineer,
5. BDO, Gubbi	0.207	Zilla Parishad Engineering
6. BDO, Kunigal	1.00	Division, Deputy Director of
7. BDO, Madhugiri	0.398	Agriculture (Soil
8. BDO, Koratagere	1.500	Conservation), DLDB and
9. BDO, C.N. Hally	1.667	BDOs. The Implementing
10. BDO, Sira	1.095	Officers have been directed to spend the amount for the
	69.167	approved works only.

ಶ್ರೀ ಜಿ. ಎಸ್. ಶಿವನಂಜಪ್ಪ:– ಮಾನ್ಯ ಅಧ್ಯಕ್ಷರೇ, ನನ್ನ ಮೊದಲನೆಯ ಪ್ರಶ್ನೆಗೆ ಉತ್ತರವಾಗಿ ಹಣ ಬಿಡುಗಡೆಯಾಗಿರುವುದನ್ನು ಅನುಬಂಧ–1ರಲ್ಲಿ ಕೊಟ್ಟಿದ್ದಾರೆ. ಎರಡನೆಯ ಪ್ರಶ್ನೆಯಲ್ಲಿ ತಾಲ್ಲೂಕುವಾರು ಮಾಹಿತಿ ಕೇಳಿದ್ದಕ್ಕೆ ಅನುಬಂಧ–2ರಲ್ಲಿ ಹಣ ಖರ್ಚಾಗಿರುವುದು ಹಾಗೂ ಉಳಿದಿರುವುದನ್ನು ತಿಳಿಸಿದ್ದಾರೆ. ಆದರಂತೆ, 1991-92ನೇ ಸಾಲಿನಲ್ಲಿ ಖರ್ಚಾಗಿರುವ ವಿವರ ಕೊಟ್ಟಿದ್ದಾರೆ. ತುಮಕೂರು ತಾಲ್ಲೂಕಿಗೆ 23.898 ಲಕ್ಷ, ಗುಬ್ಬಿ ತಾಲ್ಲೂಕಿಗೆ 18.291 ಲಕ್ಷ, ಕುಣಿಗಲ್ ತಾಲ್ಲೂಕಿಗೆ 8.228 ಲಕ್ಷ, ತಿಪಟೂರು ತಾಲ್ಲೂಕಿಗೆ 32.828 ಲಕ್ಷ, ತುರುವೇಕೆರೆ ತಾಲ್ಲೂಕಿಗೆ 8.886 ಲಕ್ಷ, ಚಿಕ್ಕನಾಯಕನ ಹಳ್ಳಿ ತಾಲ್ಲೂಕಿಗೆ 42.537, ಮಧುಗಿರಿ ತಾಲ್ಲೂಕಿಗೆ 40.827 ಲಕ್ಷ, ಕೊರಟಗೆರೆ ತಾಲ್ಲೂಕಿಗೆ 21.208 ಲಕ್ಷ, ಶಿರಾ ತಾಲ್ಲೂಕಿಗೆ 39.961 ಲಕ್ಷ ಹಾಗೂ ಪಾವಗಡ ತಾಲ್ಲೂಕಿಗೆ 35.947 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. 1991-92ನೇ ಸಾಲಿನಲ್ಲಿ ಡಿಸ್‌ಕ್ರಿಮಿನೇಷನ್ ಆಗಿಲ್ಲವೇ ? ಇಷ್ಟು ಏರು–ಪೇರು ಏಕೆ ? ಇದು ಯಾವುದಾದರೂ ಪ್ರಭಾವದಿಂದ ಈ ರೀತಿ ಆಗಿದೆಯೇ ? ಒಂದೊಂದು ತಾಲ್ಲೂಕಿಗೆ ಒದಗಿಸಿರುವ ಹಣದಲ್ಲಿ ಡಿಸ್ಕ್ರಿಮಿನೇಷನ್ ಇದೆಯಲ್ಲಾ, ಏಕೆ ಎಂದು ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಪಂಚಾಯತ್ ರಾಜ್ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೇ, ಸದರಿ ಯೋಜನೆಯಡಿ ಹಣ ಬಿಡುಗಡೆ ಮಾಡುವುದು ಮತ್ತು ಕಾರ್ಯಕ್ರಮ ಜಾರಿಗೊಳಿಸುವುದು, ಇವೆರಡನ್ನೂ ತಾಲ್ಲೂಕುವಾರು ಮಾಡುತ್ತಿಲ್ಲ. ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಅಧಿಕಾರಿಗಳು ಯಾರು ಇರುತ್ತಾರೋ, ಅವರ ಮುಖಾಂತರ ಹಣ ಕೊಟ್ಟಿರುತ್ತಾರೆ. ಈಗ ಕೊಟ್ಟಿರತಕ್ಕ ಹಣದಲ್ಲಿ ಹಾಲಿ 69 ಲಕ್ಷ ರೂಪಾಯಿಗಳ ಜೊತೆಗೆ, ಇನ್ನೂ ಖರ್ಚು ಮಾಡಬೇಕಾದ ಅವಶ್ಯಕತೆಯಿದೆ. ಯೋಜನಾವಾರ ಹಣವನ್ನು ಒದಗಿಸಲಾಗುತ್ತದೆಯೇ ವಿನಹ ತಾಲ್ಲೂಕುವಾರು ಹಣ ಒದಗಿಸಲಾಗುವುದಿಲ್ಲ. ಆದುದರಿಂದ, ಈ ರೀತಿ ವ್ಯತ್ಯಾಸ ಕಾಣುತ್ತದೆ. ಮತ್ತು ಹಣ ಕೊಡಬೇಕಾದರೆ it is on the basis of SC/ST holding in the District.

ಆ ಜಿಲ್ಲೆಯ ತಾಲ್ಲೂಕಿನಲ್ಲಿ ನಿಮ್ಮ ವರ್ಗದವರು ಎಷ್ಟು ಜನರಿದ್ದಾರೋ ಅದರ ಆಧಾರವ ಮೇಲೆ

ತಗೆದುಕೊಂಡು ಮಾಡುತ್ತೇವೆ. ಆದುದರಿಂದ, ತಾಲ್ಲೂಕುವಾರು ಹಣ ಬಿಡುಗಡೆ ಮಾಡುವುದರ ಬಗ್ಗೆ ಜಿಲ್ಲಾ ಮಟ್ಟದಲ್ಲಿ ಪ್ರಾಜೆಕ್ಟ್ ಇಂಪ್ಲಿಮೆಂಟೇಷನ್ ಕಮಿಟಿ ಎಂದು ಇದೆ. With the Chief Secretry, Zilla Parishad, as the Chairman. ಆ ಸಮಿತಿಯಲ್ಲಿರತಕ್ಕವರು ಯಾವ ಪ್ರಾಜೆಕ್ಟ್‌ಗಳಿಗೆ ಒಪ್ಪಿಗೆ ಕೊಡಬೇಕು, ಯಾವುದಕ್ಕೆ ಕೊಡಬಾರದು ಎಂದು ತೀರ್ಮಾನಿಸುತ್ತಾರೆ. ಆದುದರಿಂದ, ಒಂದೊಂದು ತಾಲ್ಲೂಕಿಗೆ ಸ್ವಲ್ಪ ಹಣದ ವ್ಯತ್ಯಾಸ ಕಾಣುತ್ತದೆ ನಿಜ ಇದರ ಬಗ್ಗೆ ಮಾನ್ಯ ಸದಸ್ಯರು ಜಿಲ್ಲಾ ಮಟ್ಟದಲ್ಲಿ ತಮ್ಮ ಪ್ರಾಜೆಕ್ಟ್‌ಗಳನ್ನು ತೆಗದುಕೊಂಡು ಜಿಲ್ಲಾಪರಿಷತ್ತಿನ ಜೊತೆ ವ್ಯವಹರಿಸಿ ಮಾಡಬಹುದು. ಅಥವಾ ಆ ಮಟ್ಟದಲ್ಲಿ ಆಗದೆ ಹೋದಲ್ಲಿ, ಸರ್ಕಾರಕ್ಕೆ ತಿಳಿಸಿದರೆ ಸೂಚನೆ ಕೊಡಲಾಗುತ್ತದೆ.

ಶ್ರೀ ಜಿ. ಎಸ್. ಶಿವಸಂಜಪ್ಪ:– ನನ್ನ ಕ್ಷೇತ್ರವಾದ ಗುಬ್ಬಿ ತಾಲ್ಲೂಕಿನಲ್ಲಿ number of projects are pending before the Zilla Parishad. ಇವರು ಏನು ಉತ್ತರ ಕೊಡುತ್ತಿದ್ದಾರೆ, ಅದು ಸರಿಯಿಲ್ಲ. ನಾನು ಕೇಳಿದರೆ ಹಣ ಇಲ್ಲವೆಂದು ಹೇಳುತ್ತಾರೆ. ಆದರೆ, ಬೇರೆ ತಾಲ್ಲೂಕುಗಳಿಗೆ 42 ಲಕ್ಷ, 40 ಲಕ್ಷ, 39 ಲಕ್ಷ ಈ ರೀತಿಯಾಗಿ ಹಣ ಕೊಡುತ್ತಾರೆ. ಇದರಲ್ಲಿ ವ್ಯತ್ಯಾಸವಿದೆ. ಇದರಲ್ಲಿ ಯಾವುದೋ ಪ್ರಭಾವ ಅಥವಾ ಕಾಣದ ಕೈಪಾಡ ನಡೆದಿದೆಯೆಂಬುದು ನನ್ನ ಭಾವನೆಯಾಗಿದೆ.

Release of money not made talukwise, but release made to implementing officers viz., Executive Engineer, Zilla Parishad and BDO ಎಂದು ಹೇಳುತ್ತಾರೆ. ಇಲ್ಲಿ B.D.O. Gubbi Taluk balance available 0.207 lakhs ಎಂದು ಹೇಳಿದ್ದೀರಿ. ಅಲ್ಲಿ ಬಿ ಡಿ ಓ ಅಧಿಕಾರಿಗಳು ಕೆಲಸ ಮಾಡುವುದಿಲ್ಲವೆ ? ಅಥವಾ ಅವರ ಹತ್ತಿರ ಇಂಪ್ಲಿಮೆಂಟಿಂಗ್ ಅಧಿಕಾರಿಗಳಿಲ್ಲವೇ ? ಇದರಲ್ಲಿ ಏನು ಅನ್ಯಾಯವಾಗಿದೆ ಇದನ್ನು ಸರಿಪಡಿಸಲು ಸರ್ಕಾರ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ಎಂಬ ಬಗ್ಗೆ ಮಂತ್ರಿಗಳಿಂದ ಸರಿಯಾದ ಉತ್ತರವನ್ನು ನಾನು ನಿರೀಕ್ಷಣೆ ಮಾಡುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೇ, ಇದು Million wells scheme ಎಂದು ಹೆಸರು ಇರತಕ್ಕ ಯೋಜನೆ. Open irrigation wells ಬಡವರಿಗೆ, ಸಣ್ಣ ಹಿಡುವಳಿದಾರರಿಗೆ, ಪರಿಶಿಷ್ಟ ವರ್ಗದವರಿಗೆ ಮತ್ತು freed bonded labourers ಇವರಿಗೆ ಮಾತ್ರ ನಿಗದಿ ಮಾಡಿರತಕ್ಕಂಥ ಯೋಜನೆ ಇದು. ಇದನ್ನು ಆಯಾ ತಾಲ್ಲೂಕಿನಲ್ಲಿ ಬಂದಿರತಕ್ಕ ಪ್ರಾಜೆಕ್ಟ್‌ನಲ್ಲಿ feasibility ಸ್ಟಡಿ ಮಾಡಿ ಆ ಕಮಿಟಿಯವರು ತೀರ್ಮಾನ ಮಾಡುತ್ತಾರೆ. ಇದರಲ್ಲಿ ಏನಾದರೂ ವ್ಯತ್ಯಾಸವಾಗಿದ್ದರೆ ಅದನ್ನು ಸರಿಪಡಿಸುತ್ತೇವೆ.

ಅಧ್ಯಕ್ಷರು:– ಮಾನ್ಯ ಬನ್ನಿಕೋಡ್‌ರವರೇ, ತಮ್ಮ ಪ್ರಶ್ನೆ ಸಂಖ್ಯೆ 1485 ಕ್ಕೆ ಮೂರು ವಾರಗಳ ಸಮಯವನ್ನು ಕೇಳಿದ್ದಾರೆ.

ಶ್ರೀ ಬಿ. ಹೆಚ್. ಬನ್ನಿಕೋಡ್:– ಸನ್ಮಾನ್ಯ ಅಧ್ಯಕ್ಷರೆ, ಮಾರ್ಚ್ 31ರೊಳಗಾಗಿ ರಾಜ್ಯದ ಜಿಲ್ಲಾಪರಿಷತ್ತುಗಳಿಗೆ, ಎಲ್ಲಾ ಯೋಜನೆಗಳಿಗೆ ಬಿಡುಗಡೆ ಮಾಡಬೇಕಾದ ಹಣವೆಷ್ಟು, ಎಷ್ಟು ಕೊಟ್ಟಿದ್ದೀರಿ; ಬಾಕಿ ಕೊಟ್ಟಲ್ಲ ಎಂದು ಕೇಳಿದರೆ ಮೂರು ವಾರಗಳ ಕಾಲ ಸಮಯ ಕೇಳಿದ್ದಾರೆಂದರೆ ಹೇಗೆ ? ರಸ್ತೆಗಳು ಹಾಳಾಗಿವೆ, ಕೆರೆಗಳು ಹಾಳಾಗಿವೆ, ನನ್ನ ಕ್ಷೇತ್ರವೊಂದರಲ್ಲೇ ಸುಮಾರು 51 ಕೆರೆಗಳು ಒಡೆದು ಹೋಗಿವೆ. ಜಿಲ್ಲಾಪರಿಷತ್ತಿನಿಂದ ಒಡೆದ ಕೆರೆಗಳನ್ನು ರಿಪೇರಿ ಮಾಡಲಿಕ್ಕೆ ಹಣ ಇಲ್ಲ; ರಸ್ತೆಗಳ ರಿಪೇರಿ ಮಾಡಿಲ್ಲ, ಹಣವಿಲ್ಲ, ಮಹಾಪೂರಕ್ಕೆ ಕೊಡಬೇಕಾಗಿದ್ದ ಹಣವನ್ನು ಕೊಟ್ಟಿಲ್ಲ; ಸರ್ಕಾರ ಈ ರೀತಿ ತನ್ನ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳಲು ಪ್ರಯತ್ನ ಮಾಡುವುದು ಸರಿಯಲ್ಲ. ದಯಮಾಡಿ

ನಾಳೆ ಇದರ ಬಗ್ಗೆ ಉತ್ತರವನ್ನು ಕೊಡಿಸಬೇಕು, ಹಣವನ್ನು ಬಿಡುಗಡೆ ಮಾಡಿಸಬೇಕು. ಕೆಲಸ ಮಾಡಿಸಬೇಕು.

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ:– ಒಂದು ವಾರದಲ್ಲಿ ಉತ್ತರ ಕೊಡುತ್ತೇವೆಂದು ಹೇಳಿ.

ಅಧ್ಯಕ್ಷರು:– ಒಬ್ಬೊಬ್ಬರು ಮಾತನಾಡಿ. ಪ್ರಶ್ನೆ ಅವರದು, ಅವರು ಮಾತನಾಡಲಿ,

ಶ್ರೀ ಬಿ. ಹೆಚ್. ಬನ್ನಿಕೋಡ್:– ಅಧ್ಯಕ್ಷರೇ, ಇಡೀ ರಾಜ್ಯಲ್ಲಿರುವ ಜಿಲ್ಲಾಪರಿಷತ್ತಿಗೆ ಮತ್ತು ಮಂಡಲ ಪಂಚಾಯಿತಿಗಳಿಗೆ ಹಣವನ್ನು ಬಿಡುಗಡೆ ಮಾಡಿಲ್ಲ, ಕೆಲಸಗಳು ಪ್ರಾರಂಭವಾಗಿಲ್ಲ, ಅದರಲ್ಲಿ ನೀರಾವರಿ ಕೆರೆಗಳು, ರಸ್ತೆಗಳು ಏನು ಹಾಳಾಗಿವೆ ಅದರ ಕೆಲಸವಾಗಿಲ್ಲ. ಕಂದಾಯ ಸಚಿವರನ್ನು ಹಣ ಕೇಳಿದರೆ ಇಲ್ಲವೆಂದು ಹೇಳುತ್ತಾರೆ. ಕೊಡಬೇಕಾಗಿರತಕ್ಕ ಹಣವನ್ನೂ ಕೊಡದಿದ್ದರೆ ಹೇಗೆ ?

ಅಧ್ಯಕ್ಷರು:– ಸಂಬಂಧಪಟ್ಟ ಮಂತ್ರಿಗಳನ್ನು ಕರೆಯಿಸಿ ಆದಷ್ಟು ಬೇಗ ಉತ್ತರವನ್ನು ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ:– ಈ ಪ್ರಶ್ನೆ ಕೇವಲ ಒಂದೇ ಒಂದು ತಾಲ್ಲೂಕಿನ ಪ್ರಶ್ನೆಯಲ್ಲ ಇದು ಇಡೀ ರಾಜ್ಯದ ಜಿಲ್ಲಾಪರಿಷತ್ತುಗಳಿಗೆ ಸಂಬಂಧಪಟ್ಟ ಪ್ರಶ್ನೆ. ಜಿಲ್ಲಾ ಪರಿಷತ್ತಿನ ಕೆಲಸದ ಬಗ್ಗೆ ಕೇಳಿದರೆ ಮೂರು ವಾರಗಳ ಸಮಯ ಕೇಳಿದರೆ ಹೇಗೆ ? ಎಲ್ಲಾ ಕಡೆ ಈ ಸಮಸ್ಯೆ ಇದೆ. ಎಲ್ಲಾ ಕಡೆ ಕೆಲಸ ನಿಂತು ಹೋಗಿದೆ, ಅವುಗಳನ್ನು ನ್ಯಾಯವಾಗಿ ಮಾರ್ಚ್ ಮುಗಿಯುವುದರೊಳಗೆ ಮುಗಿಸಬೇಕು.

ಅಧ್ಯಕ್ಷರು:– ಸಂಬಂಧಪಟ್ಟ ಮಂತ್ರಿಗಳು ಬಹಳ ಮಹತ್ವದ ವಿಚಾರದಲ್ಲಿ ದೆಹಲಿಗೆ ಹೋಗಿದ್ದಾರೆ. ಅವರು ಅಲ್ಲಿಂದ ಬಂದ ಮೇಲೆ ಅವರನ್ನು ಕರೆದು ನಾನು ಮಾತನಾಡುತ್ತೇನೆ. In the interest of all members ಇದಕ್ಕೆ ಬೇಗ ಉತ್ತರ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಹೆಚ್. ಬನ್ನಿಕೋಡ್:– ಈ ಪ್ರಶ್ನೆಯ ತೀವ್ರತೆ ತಮಗೆ ಗೊತ್ತಾಗಿದೆ. ಆದ್ದರಿಂದ ಸೋಮವಾರವಾದರೂ ಉತ್ತರ ಕೊಡಿಸಿ.

ಸರ್ಕಾರಿ ನೌಕರರ ಎರವಲು ಸೇವೆಯ ಗರಿಷ್ಠ ಅವಧಿ.

339 (1514): ಶ್ರೀ ಕೆ. ಪಿ. ಮೊಡ್ಡೆಕರ್ ದೇಸಾಯಿ (ಹಿರೇಬಾಗೇವಾಡಿ):–

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಸರ್ಕಾರಿ ನೌಕರರು ತನ್ನ ಮಾತೃ ಇಲಾಖೆಯಿಂದ ಇತರೆ ಇಲಾಖೆಗಳಿಗೆ ಎಷ್ಟು ಗರಿಷ್ಠ ಕಾಲಾವಧಿಯವರೆಗೆ ನಿಯೋಜನೆ ಮೇಲೆ ಹೋಗಬಹುದು ? ಇದಕ್ಕೆ ಸರ್ಕಾರವು ಮಾರ್ಗಸೂಚಿಯನ್ನೇನಾದರೂ ನಿಗದಿಪಡಿಸಿದೆಯೇ;

ಆ. ಬೆಳಗಾಂ ಜಿಲ್ಲಾಪರಿಷತ್ತಿನಲ್ಲಿ ಎಷ್ಟು ಜನ ಸರ್ಕಾರಿ ನೌಕರರು ನಿಯೋಜನೆ ಮೇಲೆ ಕೆಲಸ ಮಾಡುತ್ತಿದ್ದಾರೆ ? ಅವರುಗಳಲ್ಲಿ ಎಷ್ಟು ಮಂದಿ ಗರಿಷ್ಠ ನಿಯೋಜನಾವಧಿಯನ್ನು ಮೀರಿರುತ್ತಾರೆ ? (ತಾಲ್ಲೂಕುವಾರು ವಿವರ ನೀಡುವುದು);

ಇ. ಅಂತಹ ಸರ್ಕಾರಿ ನೌಕರರನ್ನು ಅವರವರ ಮಾತೃ ಇಲಾಖೆಗೆ ಹಿಂದಿರುಗಿಸುವ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ?